ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ಪ್ರಾದೇಶಿಕ ವಿಭಾಗ, ಕೊಪ್ಪಳ.
ದೂರವಾಣಿ ಮತ್ತು ಫ್ಯಾಕ್ಸ್: 08539-220021 ಇ-ಮೇಲ್: kpal.dcf@gmail.com

ಸಂ:ಎ4/ಲ್ಯಾಂಡ್/ಎಫ್‌ಸಿ/ಸಿಆರ್-5/2022-23 ದಿ:16/08/2022

## ಡಿಮ್ಯಾಂಡ್ ನೋಟಿಸ್

ಇವರಿಗೆ
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ಕೊಪ್ಪಳ.

ವಿಷಯ :- ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ ವ್ಯಾಪ್ತಿಯಲ್ಲಿ ಬರುವ 0.96 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಗುತ್ತಿಗೆ ಮೇಲೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :-
1. ಕರ್ನಾಟಕ ಸರ್ಕಾರದ ಆದೇಶ ಸಂ:ಎಫ್‌ಇಇ 09 ಎಫ್‌ಎಲ್‌ಎಲ್ 2021 (ಇ) ದಿ:02/06/2021 & 10/02/2021
2. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರ ಕಛೇರಿ ಪತ್ರ ಸಂ:ಇಇ/ಪಿಡಬ್ಲ್ಯೂಡಿ/ಕೆಪಿಎಲ್.ಜೆ-3/2022-23/294 ದಿ:30/04/2022 & 04/07/2022
3. ಈ ಕಛೇರಿ ಪತ್ರ ಸಂ:ಎ4/ಲ್ಯಾಂಡ್/ಎಫ್‌ಸಿ/ಕಬ್ಬರಗಿ/ಸಿಆರ್/22-23 ದಿ:06/07/22
4. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:ಎ5/(4)/ಎಂಐಎಸ್‌ಸಿ/ಸಿಆರ್/2010-11 ದಿ:16/02/2022
5. ಮಾನ್ಯ ಪ್ರದಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:KFD/HOFF/A5-4(GFL)/29/2020-F ದಿ:02/08/2022

ಉಲ್ಲೇಖ(1)ರ ಪ್ರಕಾರ ಕುಷ್ಟಗಿ ತಾಲೂಕಿನ ಹನುಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ 0.96 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಸರಕಾರವು ಕೆಲವೊಂದು ಷರತ್ತುಗಳೊಂದಿಗೆ ತಾತ್ವಿಕ ಅನುಮೋದನೆ (ಸ್ಟೇಜ್-1) ನೀಡಿರುವುದರಿಂದ ಸದರಿ ಷರತ್ತುಗಳಿಗೆ ಉಪಯೋಗಿ ಸಂಸ್ಥೆಯವರು ಅನುಪಾಲನಾ ವರದಿ ಹಾಗೂ ಸರಕಾರಕ್ಕೆ ಬರಬೇಕಾದ ಎನ್.ಪಿ.ವಿ. ಮೊತ್ತ ಹಾಗೂ ರಸ್ತೆಯ ಎರಡೂ ಬದಿಗಳಲ್ಲಿ Strip plantation ಬೆಳೆಸುವ ಮೊತ್ತವನ್ನು ಪಾವತಿಸಿರುತ್ತಾರೆ. ಉಲ್ಲೇಖ(3)ರ ಈ ಕಛೇರಿ ಪತ್ರ ದಿ:06/07/2022ರ ಪ್ರಕಾರ ಸದರಿ ಪ್ರಸ್ತಾವನೆಗೆ ಸ್ಟೇಜ್-2ಗೆ ಅನುಮೋದಿಸಲು ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಅನುಪಾಲನಾ ವರದಿಯನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ರವರಿಗೆ ಸಲ್ಲಿಸಲಾಗಿತ್ತು.

ಮುಂದುವರೆದು ಉಲ್ಲೇಖ(4)ರ ಪ್ರಕಾರ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಮಾರ್ಗಸೂಚಿ 11.2ರ ಪ್ರಕಾರ ಇರುವಂತೆ Linear Projectsಗೆ ಸಂಬಂಧಿಸಿದಂತೆ ಸ್ಟೇಜ್-1ಗೆ ಅನುಮೋದನೆ ಪಡೆದ



Scanned with CamScanner

ನಂತರ ಉಪಯೋಗಿ ಸಂಸ್ಥೆಯವರು ಸ್ಟೇಜ್-Iರ ಅನುಮೋದನೆಯಲ್ಲಿನ ಷರತ್ತುಗಳಲ್ಲಿ ಸೂಚಿಸಿರುವ ಮೊತ್ತವನ್ನು ಪಾವತಿಸಿದ ನಂತರ ಕರಾರು ಒಪ್ಪಂದವನ್ನು ಮಾಡಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ತಾತ್ಕಾಲಿಕ ಅನುಮತಿಯನ್ನು 1 ವರ್ಷದ ವರೆಗೆ ಮಾತ್ರ ನೀಡಲಾಗಿದೆ

ಮುಂದುವರೆದು ಉಲ್ಲೇಖ(5)ರಲ್ಲಿ ಸೂಚಿಸಿರುವಂತೆ ರಸ್ತೆ ಬದಿ ನೆಡುತೋಪು ಬೆಳೆಸುವ ಮೊತ್ತ ಪ್ರತಿ ಕಿ.ಮೀ ಗೆ ರೂ, 7,05,280.02/-ಗಳ ಪರಿಷ್ಕರಣೆಯಾಗಿರುವುದರಿಂದ ಈ ಕೆಳಕಂಡ ಪರಿಷ್ಕೃತ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಸೂಚಿಸಿದೆ.

| | | |
|---|---|---|
| 1 | ಗುತಿಗೆ ನೀಡಿರುವ ಪ್ರದೇಶದಲ್ಲಿ ರಸ್ತೆ ನಿರ್ಮಿಸಿರುವ ಎರಡು ಬದಿಗಳಲ್ಲಿ ಸ್ಟ್ರಿಪ್ ಪ್ಲಾಂಟೇಷನ್ ನಿರ್ಮಿಸುವ ಬಾಬ್ತು 2021-22ನೇ ಸಾಲಿನ ಡಾಟಾ ಶೀಟ್ ಪ್ರಕಾರ ರಸ್ತೆ ಬದಿ ನೆಡುತೋಪು ಯೋಜನೆಯಡಿ 1 ಕಿಲೋ ಮೀಟರ್‌ಗೆ ಒಂದು ಬದಿಯಲ್ಲಿ 150 ಗಿಡಗಳಂತೆ ಎರಡೂ ಬದಿಗಳಿಗೆ ಒಳಗೊಂಡಂತೆ 300 ಗಿಡಗಳಿಗೆ ರೂ, 7,00,320/-ರಂತೆ ಒಟ್ಟು 1,603 ಕಿಲೋ ಮೀಟರ್‌ಗೆ ಆಗುವ ಬಾಬ್ತು (1.603 X 7,00,320/-) | **ರೂ,11,22,613/-** |
| 2 | ಗುತಿಗೆ ನೀಡಿರುವ ಪ್ರದೇಶದಲ್ಲಿ ರಸ್ತೆ ನಿರ್ಮಿಸಿರುವ ಎರಡು ಬದಿಗಳಲ್ಲಿ ಸ್ಟ್ರಿಪ್ ಪ್ಲಾಂಟೇಷನ್ ನಿರ್ಮಿಸುವ ಬಾಬ್ತು 2022-23ನೇ ಸಾಲಿನ ಡಾಟಾ ಶೀಟ್ ಪ್ರಕಾರ ರಸ್ತೆ ಬದಿ ನೆಡುತೋಪು ಯೋಜನೆಯಡಿ 1 ಕಿಲೋ ಮೀಟರ್‌ಗೆ ಒಂದು ಬದಿಯಲ್ಲಿ 150 ಗಿಡಗಳಂತೆ ಎರಡೂ ಬದಿಗಳಿಗೆ ಒಳಗೊಂಡಂತೆ 300 ಗಿಡಗಳಿಗೆ ರೂ, 7,05,280.02/-ರಂತೆ ಒಟ್ಟು 1,603 ಕಿಲೋ ಮೀಟರ್‌ಗೆ ಆಗುವ ಬಾಬ್ತು (1.603 X 7,05,280.02/-) | **ರೂ,11,30,564/-** |
| 3 | ಪ್ರಸ್ತುತ ಪಾವತಿಸಬೇಕಾದ ಮೊತ್ತ (ವ್ಯತ್ಯಾಸದ ಮೊತ್ತ) | **ರೂ,7951/-** |

M-645
ದಿ: 18/08/2022

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪಳ ವಿಭಾಗ, ಕೊಪ್ಪಳ



Scanned with CamScanner